ಸೆಕೆಂಡ್ ಇಯರ್ ಪಿಯುಸಿ ಸೆಕೆಂಡ್ ಕ್ಲಾಸಿನಲ್ಲಿ ಪಾಸಾದ ಭರಮಣ್ಣನಿಗೆ ಬೆಂಗಳೂರಿನಲ್ಲಿ ಓದಬೇಕೆಂಬ ಆಸೆ ಹುಟ್ಟಿತು. ಹೆಂಗೂ ಕಾಲೇಜು, ಹಾಸ್ಟೆಲ್ ಫ್ರೀ ಇದ್ದವು. ತಾನು ಎಂ.ಎ. ಓದಿ ಒಬ್ಬ ಒಳ್ಳೆಯ ಲೆಕ್ಚರರ್ ಆಗಿ ಹಳ್ಳಿಗಾಡಿನ ದಲಿತರಲ್ಲಿ ಅರಿವು ಮೂಡಿಸಬೇಕೆಂದು ಪಿಯುಸಿ ಮೊದಲ ವರ್ಷದಲ್ಲೆ ಕನಸು ಕಂಡಿದ್ದ ಭರಮಣ್ಣ. ಅಪ್ಪ ಚಿಕ್ಕಮಾರಯ್ಯನೂ ''ನೀನು ಎಷ್ಟಾದ್ರೂ ಓದ್ಲ ಭರಮ. ತಿಂಗಳಿಗೆ ಒಂದೆರಡು ಸಾವ್ರಾನ ಏನಾದ್ರೂ ಬಾಧೆ ಬಿದ್ದು ಕಳಿಸಿಕೊಡ್ತೀನಿ'' ಎಂದು ಧೈರ್ಯ ತುಂಬಿದ್ದ. ಆದರೆ ತನ್ನ ಬೆನ್ನಿಗೆ ಹುಟ್ಟಿದ್ದ ಇಬ್ಬರು ತಂಗಿಯರ ಜವಾಬ್ದಾರಿ ಅಪ್ಪ ಚಿಕ್ಕಮಾರಯ್ಯನ ಮೇಲೆ ಇರುವುದನ್ನು ಭರಮಣ್ಣ ಅರಿತುಕೊಂಡವನಾಗಿದ್ದ. ಹಾಗಾಗಿ ಅಪ್ಪನಿಗೆ ಹೆಚ್ಚು ಹೊರೆಯಾಗದೆ ಓದಬೇಕೆಂದು ತೀರ್ಮಾನಿಸಿದ್ದ. ಡಿಗ್ರಿಗೆ ಬೆಂಗಳೂರು ಸೇರಿದ ಭರಮಣ್ಣ ಕಷ್ಟಪಟ್ಟು ಓದತೊಡಗಿದ. ಹಾಸ್ಟೆಲಿನಲ್ಲಿ ಎಂಜಿನಿಯರಿಂಗ್, ಮೆಡಿಕಲ್ ಓದುವ ವಿದ್ಯಾರ್ಥಿಗಳೂ ಇದ್ದರು. ಅವರದೇ ಒಂದು ಗುಂಪಾದರೆ ಆರ್ಟ್ಸ್ ಓದುವವರದ್ದೆ ಒಂದು ಗುಂಪಾಗಿತ್ತು. ರೂಮ್‌ಮೇಟ್ ಹನುಮಂತ ''ಭರಮಣ್ಣ ನಾನು ಎಂಜಿನಿಯರಿಂಗೋ, ಮೆಡಿಸಿನ್ನೋ ಓದ್ಬೇಕಾಗಿತ್ತು. ಕೋರ್ಸ್ ಮುಗಿತಿದ್ದಂಗೆ ಯಾವುದಾದರೂ ಕೆಲ್ಸ ಸಿಕ್ಕಿರೋದು. ಇನ್ನು ಡಾಕ್ಟರಾದ್ರೆ ದುಡ್ಡು ಗುಡ್ಡೆ ಹಾಕಬಹುದು. ಆದ್ರೆ ನಮ್ಮ ಹಳ್ಳಿ ಹುಡುಗುರ್ಗೆ ಇದನ್ನೆಲ್ಲಾ ಹೇಳೋರ್‍ಯಾರು. ಅದೂ ಅಲ್ದೆ ಆ ಇಂಗ್ಲಿಷು, ಗಣಿತಗಳ ಗೋಳು ಬೇರೆ. ಯಂಗೋ ಈ ಮಟ್ಟಕ್ಕೆ ಬಂದಿದ್ದೀವಿ ಅನ್ನೋದೆ ದೊಡ್ಡ ಪುಣ್ಯ...'' ಎಂದು ಇನ್ನಿಲ್ಲದೆ ಅವಲತ್ತುಕೊಂಡಿದ್ದ. ''ಹೌದ್ರಿ ಹನುಮಂತ್, ಹಳ್ಳಿಗಳಲ್ಲಿ ಹುಟ್ಟಿದ್ದೇ ನಮ್ಮ ತಪ್ಪು ಅನ್ನಿಸ್ತದೆ. ಆದರೆ ಹುಟ್ಟು ಯಾರ ಕೈಲಿ ಇದೆ ಹೇಳಿ?'' ಎಂದು ಸಂತೈಸಿದ್ದ ಭರಮಣ್ಣ. ಹಾಸ್ಟೆಲ್ಲಿನಲ್ಲಿ ಬಹುತೇಕ ವಿದ್ಯಾರ್ಥಿಗಳು ಸಿಗರೇಟು ಸೇದುತ್ತಿದ್ದರೂ, ಬಿಯರ್ ಕುಡಿಯುತ್ತಿದ್ದರೂ ಒಂದು ದಿನವೂ ಅವುಗಳ ಸಹವಾಸಕ್ಕೆ ಹೋದವನಲ್ಲ ಭರಮಣ್ಣ.

''ನೀನ್ಯಾತರ ದಲಿತನೋ ಭರ್ಮಾ? ಸೆಕೆಂಡ್ ಇಯರ್ ಡಿಗ್ರಿ ಓದ್ತಾ ಇದಿಯಾ. ಬ್ರಾಂಬ್ರು, ಲಿಂಗಾಯಿತ್ರೆ ಬಿಯರ್ ಕುಡ್ಕಂಡ್, ನಾನ್ವೆಜ್ ತಿಂದ್ಕಂಡ್, ಸಿಗರೇಟ್ ಸೇದ್ಕಂಡ್ ಮಜಾ ಮಾಡ್ತ ಅವ್ರೆ. ಹೋಗಿ ಹೈಸ್ಕೂಲು ಹುಡುಗ್ರನ್ನ ನೋಡಿ ಕಲ್ತುಕೊ'' ಎಂದು ರೇಗಿಸುತ್ತಿದ್ದರೂ ಅವುಗಳ ಸಹವಾಸಕ್ಕೆ ಹೋಗಿರಲಿಲ್ಲ. ಭಾನುವಾರದಂದೋ, ರಜಾ ದಿನಗಳಂದೋ ದಲಿತ ಸಂಘರ್ಷ ಸಮಿತಿಗಳ ಹೋರಾಟಗಳೋ, ಸೆಮಿನಾರುಗಳೋ ಇದ್ದರೆ ಹೋಗಿ ಅಟೆಂಡ್ ಮಾಡುತ್ತಿದ್ದ. ಲೀಡರುಗಳನ್ನು, ಭಾಷಣಕಾರರನ್ನು ಪರಿಚಯ ಮಾಡಿಕೊಳ್ಳುತ್ತಿದ್ದ. ಒಂದು ಸಾರಿ ಡಿಎಸ್‌ಎಸ್ ಲೀಡರ್ ಒಬ್ಬರು, ''ಏನ್ರಿ ಭರಮಣ್ಣ ಎಂಥಾ ಕಾಲದಲ್ಲಿದ್ದೀವ್ರಿ ನಾವು. ದಲಿತರು ಎಲ್ಲಾ ಕ್ಷೇತ್ರಗಳಲ್ಲೂ ಬೆಳಿಬೇಕು. ನಿಮ್ಮ ಹೆಸರನ್ನು ಬದಲಾಯಿಸಿಕೊಳ್ಳಿ. ಅಪ್ಪ ಹಾಕಿದ ಆಲದ ಮರಕ್ಕೇ ನೇಣಾಕ್ಕೊಬೇಕೇನ್ರಿ. ಒಂದೊಂದ್ ಸಾರಿ ಈ ಹೆಸ್ರುಗಳೇ ನಮ್ಮಲ್ಲಿ ಇನ್ಫಿರಿಯಾರಿಟಿ ಕಾಂಪ್ಲೆಕ್ಸ್ ಹುಟ್ಸಿ ತುಳಿದಾಕಿಬಿಡ್ತಾವ್ರಿ'' ಎಂದು ಬುದ್ಧಿವಾದ ಹೇಳಿದ್ದರು.

ಇದೇ ಸಂದರ್ಭದಲ್ಲಿ ಕನ್ನಡ ತರಗತಿಯಲ್ಲಿ ಉಪನ್ಯಾಸಕರು ಪಾಠ ಮಾಡುತ್ತಾ ಜರ್ಮನ್ ಕವಿ ಮತ್ತು ನಾಟಕಕಾರ ಬ್ರೆಕ್ಟನ ಪದ್ಯ ಮತ್ತು ನಾಟಕಗಳನ್ನು ಕುರಿತು ವಿಮರ್ಶಾತ್ಮಕ ಉಪನ್ಯಾಸ ನೀಡಿದ್ದರು. ನಾಲ್ಕು ಪಿರಿಯೆಡ್ ಪೂರ್ತಿ ಬ್ರೆಕ್ಟನ ಬಗ್ಗೆ ಆಳವಾಗಿ ವಿವರಿಸಿದ್ದರು. ಭರಮಣ್ಣನಿಗೆ ಆಸಕ್ತಿ ಹುಟ್ಟಿ ಲೈಬ್ರರಿಗೆ ಹೋಗಿ ಬ್ರೆಕ್ಟ್ ಬಗ್ಗೆ ಲಭ್ಯವಿದ್ದ ಎಲ್ಲಾ ಪುಸ್ತಕಗಳನ್ನು ತಂದು ಹದಿನೈದು ದಿನಗಳ ಕಾಲ ಓದಿದ್ದ! ಬ್ರೆಕ್ಟ್ ಒಬ್ಬ ಅದ್ಭುತ ಬರಹಗಾರ ಅನ್ನಿಸಿತು ಅವನಿಗೆ. ಬ್ರೆಕ್ಟ್ ಭಾರತದಲ್ಲೆ ಹುಟ್ಟಿ ಇಲ್ಲಿನ ವ್ಯವಸ್ಥೆಯ ಬಗ್ಗೆಯೇ ಬರೆದಿರುವಂತೆ ಅನ್ನಿಸಿತ್ತು ಭರಮಣ್ಣನಿಗೆ. ಭಾರತದ ಸಂದರ್ಭದಲ್ಲಿ ಬ್ರೆಕ್ಟ್ ಎಷ್ಟು ಪ್ರಸ್ತುತನಾಗುತ್ತಾನೆ ಎಂಬುದರ ಬಗ್ಗೆ ಒಂದು ಪ್ರಬಂಧವನ್ನು ಬರೆದು ಉಪನ್ಯಾಸಕರಿಗೆ ತೋರಿಸಿದ್ದ. ಉಪನ್ಯಾಸಕರು ಮೆಚ್ಚಿ ಆ ಪ್ರಬಂಧವನ್ನು ತಾವೇ